ಕನ್ನಡ
ಸಂಭ್ರಮ

# ಹಲವು ಪ್ರಥಮಗಳ ಕನ್ನಡತಿ

## ಎಚ್‌. ಎಸ್‌. ಸಾವಿತ್ರಿ: ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪಡೆದ ಪ್ರಥಮ ಮಹಿಳಾ ವಿಜ್ಞಾನಿ

**ಪ್ರೊ. ಎಚ್‌.ಎಸ್‌. ಸಾವಿತ್ರಿ ನಾಡಿನ ಶ್ರೇಷ್ಠ ವಿಜ್ಞಾನಿಗಳಲ್ಲೊಬ್ಬರು. ಹಲವು ಮೊದಲುಗಳ ಈ ಸಾಧಕಿಗೆ 'ರಾಜ್ಯೋತ್ಸವ ಪ್ರಶಸ್ತಿ' ಸಲ್ಲುವ ಮೂಲಕ, ಇದೇ ಮೊದಲ ಬಾರಿಗೆ ಮಹಿಳಾ ವಿಜ್ಞಾನಿಯೊಬ್ಬರಿಗೆ ರಾಜ್ಯೋತ್ಸವ ಪ್ರಶಸ್ತಿ ಸಂದಂತಾಗಿದೆ.**

■ ನೇಮಿಚಂದ್ರ



ಕನ್ನಡ ರಾಜ್ಯೋತ್ಸವ ಪ್ರಶಸ್ತಿಗೆ ಹೊಸ ಆಯಾಮವೊಂದು ಸೇರಿಕೊಂಡಿದೆ. 66ನೇ ಕನ್ನಡ ರಾಜ್ಯೋತ್ಸವದ ಸಂದರ್ಭದಲ್ಲಿ, ಮೊದಲ ಬಾರಿಗೆ ಮಹಿಳಾ ವಿಜ್ಞಾನಿಯೊಬ್ಬರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಿ ಗೌರವಿಸಿರುವುದು, ವಿಜ್ಞಾನ ರಂಗಕ್ಕೆ ಮಹಿಳೆಯರು ನೀಡಿರುವ ಕೊಡುಗೆಯನ್ನು ಗುರುತಿಸುವತ್ತ ಇಟ್ಟ ಸಕಾರಾತ್ಮಕ ಹೆಜ್ಜೆಯಾಗಿದೆ. ಇಂತಹ ಗೌರವಕ್ಕೆ ಪಾತ್ರರಾದವರು, ನಮ್ಮ ನಡುವಿನ ಓರ್ವ ಶ್ರೇಷ್ಠ ವಿಜ್ಞಾನಿ ಪ್ರೊ. ಎಚ್.ಎಸ್. ಸಾವಿತ್ರಿ ಅವರು. ಪ್ರತಿಷ್ಠಿತ ವಿಜ್ಞಾನ ಸಂಸ್ಥೆ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್'ನಲ್ಲಿ ಎಮರಿಟಸ್ ಪ್ರೊಫೆಸರ್ ಎಂಬ ಗೌರವಾನ್ವಿತ ಶಿರೋನಾಮೆಯನ್ನು ಪಡೆದ ಹಿರಿಯ ವಿಜ್ಞಾನಿ ಇವರು. ಇದೇ ವಿಜ್ಞಾನ ಸಂಸ್ಥೆಯ ನೂರು ವರ್ಷಗಳ ಇತಿಹಾಸವಿರುವ ಜೀವರಸಾಯನ ಶಾಸ್ತ್ರ (ಬಯೋಕೆಮಿಸ್ಟ್ರಿ) ವಿಭಾಗದ ಪ್ರಥಮ ಹಾಗೂ ಏಕೈಕ ಮಹಿಳಾ ಅಧ್ಯಕ್ಷರಾದವರು ಎನ್ನುವ ಹಿರಿಮೆಯೂ ಸಾವಿತ್ರಿ ಅವರದಾಗಿದೆ.

ಪ್ರೊ. ಸಾವಿತ್ರಿಯವರು (ಜನನ: ಮಾರ್ಚ್ 18, 1951) ಬೆಂಗಳೂರಿನಲ್ಲಿ ಜನಿಸಿದವರು, ಬೆಂಗಳೂರು ವಿಶ್ವವಿದ್ಯಾಲಯದಿಂದ ಬಿ.ಎಸ್ಸಿ. (ಆನರ್ಸ್) ಮಾಡಿದವರು. ಸೆಂಟ್ರಲ್ ಕಾಲೇಜಿನಲ್ಲಿ ಓದಿ, 1972ರಲ್ಲಿ ರಸಾಯನಶಾಸ್ತ್ರದಲ್ಲಿ ಎಂ.ಎಸ್ಸಿ. ಪದವಿಯನ್ನು ಪಡೆದ ಅವರು, 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್'ನ ಜೀವರಸಾಯನಶಾಸ್ತ್ರ ವಿಭಾಗವನ್ನು ಸೇರಿದರು. ಅವರ ಸಂಶೋಧನೆಗೆ ಮಾರ್ಗದರ್ಶಿಗಳಾದವರು ಪ್ರೊ. ಎನ್. ಅಪ್ಪಾಜಿ ರಾವ್. 'ಅದು ನನ್ನ ಬದುಕಿನ ಮಹತ್ವದ ತಿರುವು. ಓರ್ವ ಹೆಸರಾಂತ ವಿಜ್ಞಾನಿ ಮತ್ತು ಅಪರೂಪದ ಹೃದಯವಂತಿಕೆಯ ಮನುಷ್ಯರವರು. ಸಹೋದ್ಯೋಗಿಗಳೊಡನೆ ಕರುಣೆಯಿಂದ ವರ್ತಿಸುವ ಉದಾರ ಗುಣ, ವಿಜ್ಞಾನ ಬಗೆಗಿನ ಅವರ ಉತ್ಕಟ ಆಸ್ಥೆ ನಮಗೆಲ್ಲ ಅನುಕರಿಸುವಂತಹ ಆದರ್ಶವಾಯಿತು' ಎನ್ನುತ್ತಾರೆ ಪ್ರೊ. ಸಾವಿತ್ರಿ.

ಪ್ರೊ. ಅಪ್ಪಾಜಿರಾವ್ ಅವರು ಕಿಣ್ವಶಾಸ್ತ್ರದಲ್ಲಿ ತಜ್ಞರು. ಅವರು ಸಾವಿತ್ರಿಯವರಿಗೆ ಮಾಡಲು ಹೇಳಿದ ಕಿಣ್ವಗಳನ್ನು ಕುರಿತ ಮೊದಲ ಪ್ರಯೋಗ, ಚೊಚ್ಚಲ